# ನವಿಲುಗನ್ನಡಿ

- 'ಮಯೂರ' ಮಾರ್ಚ್ ಸಂಚಿಕೆ ನೋಡಿದೆ. ನೋಡಿ ಅವಾಕ್ಕಾದೆ!

**ಸವಿತಾ ನಾಗಭೂಷಣ, ಶಿವಮೊಗ್ಗ**

- ಸಂದರ್ಶನಗಳು ಅರ್ಥಪೂರ್ಣವಾಗಿವೆ. ಜಯಂತ ಕಾಯ್ಕಿಣಿ ಅವರ ಮಾತುಗಳಲ್ಲಿ ವರ್ತಮಾನದ ಬದುಕಿನ ಚಿತ್ರಣವಿದ್ದರೆ, ಪುರುಷೋತ್ತಮ ಬಿಳಿಮಲೆ ಅವರ ಮಾತುಗಳಲ್ಲಿ ಈ ಕಾಲದ ಕನ್ನಡ ಭಾಷೆ, ವಿಶ್ವವಿದ್ಯಾಲಯಗಳು, ಸಂಶೋಧನೆಗಳ ಆಳ ಅಗಲವಿದೆ.

**ಎನ್. ಮಹದೇವ, ಚೆನ್ನೈ**

- ಓದುಗರ ಮನೋಬೀದಿಯಲ್ಲಿ ಸದಾ ಓಡಾಡಿಕೊಂಡಿರುವ ಹಲವು ಪಾತ್ರಗಳನ್ನು ಸೃಷ್ಟಿಸಿದ ಕನ್ನಡದ ಪ್ರಮುಖ ಕತೆಗಾರ ಜಯಂತ ಕಾಯ್ಕಿಣಿ ಅವರ ಸಂದರ್ಶನ ಆಪ್ತವಾಗಿದೆ.

**ನಗರ ಗುರುದೇವ ಭಂಡಾರ್ಕರ್, ಹೊಸನಗರ**

- ಜಯಂತ ಕಾಯ್ಕಿಣಿ ಸಂದರ್ಶನ ಭಿನ್ನವಾಗಿ ಮೂಡಿಬಂದಿದೆ.ಅವರ ಕವನಗಳ ಬಗ್ಗೆ ಒಂದು ಪ್ರಶ್ನೆ ಇರಬಹುದಿತ್ತು. ಜಯಂತ ಅವರ ವ್ಯಕ್ತಿತ್ವ ನಡೆ ನುಡಿ ಸದಾ ಚೇತೋಹಾರಿ.

**ಬಿ.ಕೆ. ಸುಮತಿ, ಬೆಂಗಳೂರು**

- ರಹಮತ್ ತರೀಕೆರೆ ಅವರ 'ಪಯಣದ ಚೇಷ್ಟೆಗಳು' ಪ್ರಬಂಧ ಓದಿದಾಗ ಮನದಲ್ಲಿ ಆಹ್ಲಾದ ಭಾವ ರಿಂಗಣಿಸಿತು. ಬಳ್ಳಾರಿ ಭಾಷೆಯ ವಿಶಿಷ್ಟ ಪದಪ್ರಯೋಗ ಮನಮುಟ್ಟುವಂತಿದೆ.

**ಕನಕಪ್ಪ ವಾಗನಗೇರಿ, ಸುರಪುರ,**
**ಗುರುಮೂರ್ತಿ ಪೆಂಡಕೂರು, ಬೆಂಗಳೂರು**




- ಈ ಸಂಚಿಕೆಯ ಅತಿ ಸಣ್ಣಕತೆಗಳ ಗುಚ್ಛ ಗಮನ ಸೆಳೆಯಿತು. ಪ್ರತಿ ಕತೆಯೂ ಮನದಲ್ಲಿ ಚಿರಕಾಲ ಉಳಿವಂತಿದೆ.

**ಸುಂದರ್, ಬೆಂಗಳೂರು**

- ಈ ಸಂಚಿಕೆಯ ಸಣ್ಣಕತೆಗಳು, ವಿಮರ್ಶೆ, ಪ್ರಬಂಧ ಒಂದಕ್ಕಿಂತ ಒಂದು ಚೆಂದವಾಗಿವೆ.

**ಭಾರತಿ ಬಿ. ಕುಲಕರ್ಣಿ, ಧಾರವಾಡ**

- 'ಸ್ಮೃತಿಬಿಂಬ'ದಲ್ಲಿ ಮೂಡಿ ಬಂದ ಚಿತ್ರ ಖುಷಿ ಕೊಟ್ಟಿತು.

**ಮೋಹನ ಭಟ್, ಶಿವಮೊಗ್ಗ**

- ಅತಿ ಸಣ್ಣಕತೆಗಳು ಸೊಗಸಾಗಿದ್ದವು. ಎಸ್.ಎಫ್. ಯೋಗಪ್ಪನವರ ಕತೆ 'ಪಯಣ' ಓದಿ ಮನ ಮಿಡಿಯಿತು.

**ಸಿ.ಜಿ. ಹಿರೇಮಠ, ಲಕ್ಷ್ಮೇಶ್ವರ**

- ರವಿ ಬೆಳಗೆರೆ ಅವರ ಕತೆ 'ಸಾವು ಸವರಿದ ಮನೆ' ವಿಶಿಷ್ಟವಾಗಿತ್ತು. ಹುಬ್ಬಳ್ಳಿಯ ಭಾಷೆ, ಸಂಸ್ಕೃತಿಯ ಜೊತೆಗೆ ಒಂದು ಕುಟುಂಬದ ಮನಃಸ್ಥಿತಿ, ತಾಯಿಯ ಹಪಾಹಪಿ, ಗಂಡನ ಅಸಹಾಯಕತೆ ಮನಕಲುಕಿದವು.

**ಎ.ಕೆ. ವಾಸನ್, ಹುಬ್ಬಳ್ಳಿ**